17

ಕರ್ನಾಟಕ ಸರ್ಕಾರ

ಸಮಗ್ರ ಮಕ್ಕಳ ರಕ್ಷಣಾ ಯೋಜನೆ

ಸಂಖ್ಯೆ:ಕೆ.ಎಸ್.ಐ.ಸಿ.ಪಿ.ಎಸ್/ಕಟ್ಟಡ/ಆಹಾರ-06/2020-21 ದಿನಾಂಕ:29-06-2020

**ಸುತ್ತೋಲೆ**

ವಿಷಯ: ಮಕ್ಕಳ ಪಾಲನಾ ಸಂಸ್ಥೆಗಳಲ್ಲಿರುವ ನಿವಾಸಿಗಳಿಗೆ ಬಿರಿಯಾನಿ ಹಾಗೂ ಚಾಕೊಲೇಟ್‌ನ್ನು ಒದಗಿಸಲು ಆಹಾರ ಮೆನುವಿನಲ್ಲಿ ಅಳವಡಿಸುವ ಕುರಿತು.

ಉಲ್ಲೇಖ:1.ಸರ್ಕಾರದ ಆದೇಶ ಸಂಖ್ಯೆ:ಮಮಇ 116 ಮಭಾಬ 2009 ಬೆಂಗಳೂರು ದಿನಾಂಕ:15-02-2011.

2.ಸರ್ಕಾರದ ಆದೇಶ ಸಂಖ್ಯೆ:ಮಮಇ 83 ಮಭಾಬ 2012 ಬೆಂಗಳೂರು ದಿನಾಂಕ:19-10-2012.

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಸಮಗ್ರ ಮಕ್ಕಳ ರಕ್ಷಣಾ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವಂತಹ ಬಾಲನ್ಯಾಯ(ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ 2015ರ ಅನ್ವಯ ನೋಂದಣಿಯಾಗಿರುವ ಎಲ್ಲಾ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿರುವ ನಿವಾಸಿಗಳಿಗೆ ಈಗಾಗಲೇ ಮೆನುವಿನ ಪ್ರಕಾರ ಆಹಾರವನ್ನು ವಿತರಿಸುತ್ತಿರುವುದು ತಿಳಿದ ವಿಚಾರವಾಗಿದೆ.

ಇತ್ತೀಚೆಗೆ ನಿರ್ದೇಶಕರು, ಸಮಗ್ರ ಮಕ್ಕಳ ರಕ್ಷಣಾ ಯೋಜನೆ, ನಿರ್ದೇಶನಾಲಯ, ಬೆಂಗಳೂರುರವರು ಹಲವಾರು ಸಂಸ್ಥೆಗಳಿಗೆ ಭೇಟಿ ನೀಡಿ ಮಕ್ಕಳೊಡನೆ ಚರ್ಚಿಸಿದ ಸಂದರ್ಭದಲ್ಲಿ ಸಂಸ್ಥೆಯಲ್ಲಿರುವ ಮಕ್ಕಳು ತಮಗೆ ವಾರದಲ್ಲಿ ಒಮ್ಮೆಯಾದರೂ ಬಿರಿಯಾನಿ ಮತ್ತು ಚಾಕೊಲೇಟ್ ಬೇಕು ಎಂಬ ಅನಿಸಿಕೆಯನ್ನು ವ್ಯಕ್ತಪಡಿಸಿರುವುದನ್ನು ಗಮನಿಸಲಾಯಿತು.

ಈ ಹಿನ್ನೆಲೆಯಲ್ಲಿ ಮಕ್ಕಳು ಅಪೇಕ್ಷಿಸಿದ ಬಿರಿಯಾನಿ ಹಾಗೂ ಚಾಕೊಲೇಟ್ ಆಹಾರವನ್ನು ಬಾಲನ್ಯಾಯ(ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ 2015ರ ಅನ್ವಯ ಕನಿಷ್ಠ ಪಕ್ಷ ವಾರದಲ್ಲಿ ಒಮ್ಮೆಯಾದರೂ ವಿತರಿಸುವ ಸಲುವಾಗಿ ಆಹಾರ ಮೆನುವಿನಲ್ಲಿ ಇವುಗಳನ್ನು ಅಳವಡಿಸಲು ಉದ್ದೇಶಿಸಲಾಗಿದೆ. ಉಲ್ಲೇಖ(1)ರ ಸರ್ಕಾರದ ಆದೇಶದಲ್ಲಿ ಬಾಲಮಂದಿರ/ವೀಕ್ಷಣಾಲಯದ ಮಕ್ಕಳಿಗೆ ಮಾಂಸಹಾರವನ್ನು ನೀಡಲು ಈ ಹಿಂದೆ ಆದೇಶವಾಗಿರುತ್ತದೆ. **ಇದರನ್ವಯ ವಾರದಲ್ಲಿ ಒಂದು ದಿನ ಮಕ್ಕಳಿಗೆ ಮಾಂಸಹಾರವನ್ನು ತಯಾರಿಸಲು ಉಪಯೋಗಿಸುವ ಸಾಮಗ್ರಿಗಳನ್ನು ಬಳಸಿ ಬಿರಿಯಾನಿ ತಯಾರಿಸಿ ಕೊಡುವುದು ಹಾಗೂ ಉಲ್ಲೇಖ(2)ರ ಸರ್ಕಾರದ ಆದೇಶದಲ್ಲಿ ಬಾಲಮಂದಿರ/ವೀಕ್ಷಣಾಲಯದ ಮಕ್ಕಳಿಗೆ ಹಾಲು ಹಾಗೂ ಹಾಲಿನ ಉತ್ಪನ್ನಗಳನ್ನು ಒದಗಿಸಲು ತಿಳಿಸಿರುವುದರಿಂದ, ಸದರಿ ಉತ್ಪನ್ನದಡಿಯೇ ಮಕ್ಕಳಿಗೆ ಹಾಲಿನಿಂದ ತಯಾರಿಸಿದ ಚಾಕೊಲೇಟ್ ಖರೀದಿಸಿ ಕೊಡುವಂತೆ ತಿಳಿಸಿ** ಈ ಸುತ್ತೋಲೆ ಹೊರಡಿಸಿದೆ. ಇದನ್ನು ಅನುಷ್ಠಾನಕ್ಕೆ ತರುವ ನಿಟ್ಟಿನಲ್ಲಿ ಎಲ್ಲಾ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಅಗತ್ಯ ಕ್ರಮವಹಿಸಲು ಈ ಮೂಲಕ ಆದೇಶಿಸಲಾಗಿದೆ.

29.06.2020

ನಿರ್ದೇಶಕರು,
ಸಮಗ್ರ ಮಕ್ಕಳ ರಕ್ಷಣಾ ಯೋಜನೆ,
ಬೆಂಗಳೂರು.

ಪ್ರತಿಯನ್ನು:

1. ಎಲ್ಲಾ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.
2. ಎಲ್ಲಾ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು.
3. ರಾಜ್ಯದ ಎಲ್ಲಾ ಮಕ್ಕಳ ಪಾಲನಾ ಸಂಸ್ಥೆಗಳ ಅಧೀಕ್ಷಕರುಗಳಿಗೆ.

REDMI NOTE 8
AI QUAD CAMERA